ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರಕಾರ

# ವಿಜ್ಞಾನ ಲೋಕ

ಸಂಪುಟ : 19, ಸಂಚಿಕೆ 01 ಮೇ - ಜೂನ್ - 2025

## ಪ್ರಾಚೀನದೊಳಕ್ಕೆ ತೆರೆದ ಕಿಟಕಿ



# ವಿಜ್ಞಾನ ಲೋಕ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಕಟಣೆ

## ದ್ವೈಮಾಸಿಕ ನಿಯತಕಾಲಿಕೆ

ಸಂಪುಟ : 19 ಸಂಚಿಕೆ : 1 ಮೇ – ಜೂನ್ 2025

ಪ್ರಧಾನ ಸಂಪಾದಕರು
**ನಾಡೋಜ ಡಾ. ಪಿ. ಎಸ್. ಶಂಕರ್**

ಪ್ರಕಾಶಕರು
**ಡಾ. ಎ.ಎಂ. ರಮೇಶ್**
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಸದಸ್ಯರು
**ಡಾ. ಎ.ಎಂ. ರಮೇಶ್**
**ಡಾ. ಆನಂದ್ ಆರ್.**

ಕಛೇರಿ :
**ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ**
**ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆವರಣ,**
**ಮೇಜರ್ ಉನ್ನಿಕೃಷ್ಣನ್ ರಸ್ತೆ, ದೊಡ್ಡ ಬೆಟ್ಟಹಳ್ಳಿ**
**ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು–560 097**
**ದೂರವಾಣಿ–ಫ್ಯಾಕ್ಸ್ 080–29721550**

ಸಂಚಿಕೆ ವಿನ್ಯಾಸ ಮತ್ತು ತಯಾರಿಕೆ :
**ಡಾ. ಪಿ.ಎಸ್. ಶಂಕರ ಪ್ರತಿಷ್ಠಾನ**
ಕಲಬುರಗಿ


**ಲೇಖನಗಳಲ್ಲಿ ಮೂಡಿ ಬರುವ ಅಭಿಪ್ರಾಯಗಳು ಲೇಖಕರ ಸ್ವಂತ ಅಭಿಪ್ರಾಯಗಳಾಗಿದ್ದು, ಈ ಅಭಿಪ್ರಾಯಗಳಿಗೆ ಅಕಾಡೆಮಿಯು ಹೊಣೆಯಾಗುವುದಿಲ್ಲ.**

| ಚಂದಾದಾರಿಕೆ | ವೈಯಕ್ತಿಕ | ಸಾಂಸ್ಥಿಕ |
|---|---|---|
| ಬಿಡಿ ಪ್ರತಿ | ರೂ. 50/– | ರೂ. 500/– |
| ವಾರ್ಷಿಕ | ರೂ. 300/– | ರೂ. 1500/– |


ಮುದ್ರಣ :
**ವಿಶ್ವಾಸ್ ಪ್ರಿಂಟರ್ಸ್**
16/3–2–2 20ನೇ ಕ್ರಾಸ್, 6ನೇ ಮೈನ್,
ಭುವನೇಶ್ವರಿ ನಗರ, ಕೆ.ಪಿ. ಅಗ್ರಹಾರ, ಬೆಂಗಳೂರು–23


## ಒಳಗೇನಿದೆ


- ಆರೋಗ್ಯಕರ ಪ್ರಾರಂಭ, ಭರವಸೆಯ ಭವಿಷ್ಯ 2
- ಕುಂಭಮೇಳ, ಎಐ ಮತ್ತು ಗಾಂಧೀಜಿ
  – ನಾಗೇಶ ಹೆಗಡೆ 4
- ಮಾತಲ್ಲದ ನುಡಿ, ಪದವಿಲ್ಲದ ಮಾತು
  – ಕೊಳ್ಳೇಗಾಲ ಶರ್ಮ 7
- ಪೈಥಾಗೊರಸ್ ಪ್ರಮೇಯ ಮತ್ತು ಅಮೆರಿಕದ ಅಧ್ಯಕ್ಷರು
  – ಡಾ. ಎಚ್ ಆರ್ ಕೃಷ್ಣಮೂರ್ತಿ 10
- ಹಂಪಿಯ ವಿಠಲನೆದುರು ಸ್ತಂಭಗಳ ಸ್ವರವಾದನ...
  – ಡಾ.ಮಂಜುನಾಥ ಎಮ್. 12
- ಯಂತ್ರ ಕಲಿಕೆ ಮತ್ತು ಕೃತಕ ನರಮಂಡಲ:
  2024 ರ ನೊಬೆಲ್ ಪ್ರಶಸ್ತಿ ವಿಜೇತರ ಸಾಧನೆ
  – ತಳಿ ನಂಜಪ್ಪ ರಾಜಶೇಖರ 14
- ಗಾಜಿನಂತಹ ಲೋಹ
  – ಪ್ರೊ. ಕೆ. ಎಸ್. ನಟರಾಜ್ 17
- ಸನ್ನಿ ಡೆಲಿರಿಯಂ – ಡಾ. ಸಿ.ಆರ್. ಚಂದ್ರಶೇಖರ್ 19
- ಪ್ಲಾಸ್ಟಿಕ್ಸ್ ಬಳಕೆಯಿಂದ ಪರಿಸರ ಮಾಲಿನ್ಯ
  – ಎಂ.ಎಸ್.ಎಸ್. ಮೂರ್ತಿ 21
- ಶನಿಯ ಮೇಲೆ ವಕ್ರದೃಷ್ಟಿ: ಉಂಗುರುಗಳೇ ಅದೃಶ್ಯ!
  – ರಾಜಬಕ್ಷಿ ಕೆ. ಕೊಟ್ಟೂರು 23
- ಇಸ್ರೋದ ಮತ್ತೊಂದು ಮೈಲಿಗಲ್ಲು ಸ್ಪೇಸ್ ಡೆಕ್ಸ್
  – ಮಹಮ್ಮದ್ ರಫೀಕ್ ಕೊಟ್ಟೂರು 26
- ಏರೋಪ್ಲೇನ್ ಚಿಟ್ಟೆಗಳ ರಮ್ಯ ಲೋಕ
  – ಕಲ್ಗುಂಡಿ ನವೀನ 28
- ವಿಶ್ವದ ಅತಿ ಭಾರವಾದ ಆಕಾಶಕಾಯ–ನ್ಯೂಟ್ರಾನ್ ನಕ್ಷತ್ರ :
  – ಡಾ. ಶಾರದಾ ನಾಗಭೂಷಣ 31
- ಪುಸ್ತಕ ವಿಮರ್ಶೆ:
  ನೊಬೆಲ್ ಪ್ರಶಸ್ತಿ ಪುರಸ್ಕೃತ ಮಹಿಳಾ ವಿಜ್ಞಾನಿಗಳು 34
- ಕರ್ನಲ್ ಜಾನ್ ಪೆನ್ನಿಕ್ಯುಕ್ 35
- ವಿಜ್ಞಾನ, ತಂತ್ರಜ್ಞಾನ, ಕೈಗಾರಿಕಾ ಕ್ರಾಂತಿಗಳು ಮತ್ತು
  ಶಿಕ್ಷಣದ ಭವಿಷ್ಯ : ಪ್ರೊ. ಎಸ್. ಕೆ ಸೈದಾಪುರ 37


## ಮುಖಚಿತ್ರ

### ಪ್ರಾಚೀನದೊಳಕ್ಕೆ ತೆರೆದ ಕಿಟಕಿ

ಅಮೇರಿಕೆಯ ವಯೋಮಿಂಗ್ ರಾಜ್ಯದ ರಾಕಿ ಪರ್ವತ ಶ್ರೇಣಿಯ ಈಶಾನ್ಯ ಭಾಗದಲ್ಲಿ ಉಷ್ಣತೆಯ ಹೆಚ್ಚಳಕ್ಕೆ ಕರಗುತ್ತಿರುವ ಹಿಮಗಲ್ಲುಗಳು ತಮ್ಮೊಳಗೆ ಹುದುಗಿ ಹೋಗಿದ್ದ 5900 ರಿಂದ 5440 ವರುಷಗಳ ಹಿಂದೆ ಬದುಕಿದ್ದ ಹಳೆಯ ಪೈನ್ ವೃಕ್ಷಗಳ ಸಮೂಹವನ್ನು ಅನಾವರಣಗೊಳಿಸಿದೆ. ಕರಗುತ್ತಿರುವ ಹಿಮೋಚ್ಛಾದಿತ ಹಿಮ ರಾಶಿಯಲ್ಲಿ ಪ್ರಾಚೀನ ಅರಣ್ಯವನ್ನು ಕಂಡು ಪ್ರಾಚ್ಯ ವಸ್ತು ಶೋಧಕರು ದಿಗ್ಭ್ರಮೆಗೊಂಡಿದ್ದಾರೆ. ರೇಡಿಯಂ ಕಾರ್ಬನ್ ಡೇಟಿಂಗ್ ಬಳಸಿ ಮತ್ತು ಕಾಂಡ ಉಂಗುರಗಳನ್ನು ಅಭ್ಯಸಿಸಿ, ಸಮುದ್ರ ಮಟ್ಟದಿಂದ 3100 ಮೀಟರ್ ಎತ್ತರದ ಹಿಮಾಚ್ಛಾದಿತ ಪ್ರದೇಶದಲ್ಲಿ ಬೆಳೆದ 80 ಪೈನ್ ವೃಕ್ಷಗಳ (ಪೈನಸ್ ಆಲ್ಬಕೌಲಿಸ್) ಸಮೂಹವನ್ನು ಕಂಡಿದ್ದಾರೆ. ಏರುತ್ತಿರುವ ಉಷ್ಣತೆ ಹಿಮವನ್ನು ಕರಗಿಸಿ, ಹೊಮೊಸೀನ್ ಕಾಲಘಟ್ಟದಲ್ಲಿ ಹಿಮದ ಗೋರಮಾಳ ಸೇರಿದ್ದ, ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದ ಹೊರಬಂದಿದೆ. ಈ ಸಸ್ಯ ಸಂಪತ್ತಿನ ನಾಶಕ್ಕೆ ಏರುತ್ತಿರುವ ತಾಪಮಾನ, ಬರ, ಕಾಡ್ಗಿಚ್ಚು, ಪರ್ವತ ಮಿಡತೆಗಳ ಧಾಳಿ ಕಾರಣವಾಗಿವೆ.

## ಸಂಪಾದಕೀಯ


# ಆರೋಗ್ಯಕರ ಪ್ರಾರಂಭ, ಭರವಸೆಯ ಭವಿಷ್ಯ

ನಾಡೋಜ. ಡಾ. ಪಿ.ಎಸ್.ಶಂಕರ್

ವಿಶ್ವ ಆರೋಗ್ಯ ದಿನವನ್ನು ಪ್ರತಿ ವರುಷ ಏಪ್ರಿಲ್ 7 ರಂದು ವಿಶ್ವ ಆರೋಗ್ಯ ಸಂಸ್ಥೆಯ ಅಧೀನದಲ್ಲಿ ಜಾಗತಿಕವಾಗಿ ಜನಪದದಲ್ಲಿ ಆರೋಗ್ಯಕರ ಜೀವನದ ಬಗೆಗಿನ ತಿಳಿವಳಿಕೆಯನ್ನು ಹೆಚ್ಚಿಸುವ ಸಲುವಾಗಿ ಆಚರಿಸಲಾಗುತ್ತದೆ.

ಏಪ್ರಿಲ್ 7, 1945 ರಲ್ಲಿ ಸ್ಥಾಪನೆಯಾದ ವಿಶ್ವ ಆರೋಗ್ಯ ಸಂಸ್ಥೆಯ ವಾರ್ಷಿಕ ದಿನ. ಅದು ಸ್ಥಾಪನೆಯಾಗಿ 75 ವರುಷಗಳಾದವು. ಅದು ಪ್ರತಿ ವರುಷ ಜಗತ್ತಿಗೆ ಸಂಬಂಧಿಸಿದಂತೆ ಧ್ಯೇಯ ವಾಕ್ಯವನ್ನು ಬಿಡುಗಡೆ ಮಾಡುತ್ತದೆ. ಪ್ರಚಲಿತ ವರುಷದಲ್ಲಿ ಅದರ ಧ್ಯೇಯ ವಾಕ್ಯ; 'ಆರೋಗ್ಯಕರ ಪ್ರಾರಂಭ, ಭರವಸೆಯ ಭವಿಷ್ಯ'. ಅದು ವಿಶೇಷವಾಗಿ ತಾಯಂದಿರ ಮತ್ತು ನವಜಾತ ಶಿಶುಗಳ ಆರೋಗ್ಯ ಸುಧಾರಿಸಿ ಬದುಕುಳಿಯುವುದಕ್ಕೆ ಸಂಬಂಧಿಸಿದೆ. ಕೋಟ್ಯಾವಧಿ ಜನರ ಆರೋಗ್ಯ ಸುಧಾರಣೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

ಪ್ರತಿ ವರುಷ ಮೂರು ಲಕ್ಷ ಸ್ತ್ರೀಯರು ಗರ್ಭಧಾರಣೆ ಮತ್ತು ಹೆರಿಗೆಗೆ ಸಂಬಂಧಿಸಿದ ತೊಂದರೆಗಳಿಂದ ಸಾಯುತ್ತಾರೆ ಎಂದು ಲೆಕ್ಕ ಹಾಕಲಾಗಿದೆ. ಸುಮಾರು 20 ಲಕ್ಷ ಎಳೆ ಕೂಸುಗಳು ತಾವು ಜನಿಸಿದ ಮೊದಲ ತಿಂಗಳಲ್ಲಿಯೇ ಸಾಯುತ್ತವೆ. ಅಲ್ಲದೆ ಅಷ್ಟೇ ಸಂಖ್ಯೆಯಲ್ಲಿ ಕೂಸುಗಳು ಸತ್ತು ಜನ್ಮ ತಳೆಯುತ್ತವೆ. ಅವರಿಗೆ ಆರೋಗ್ಯ ಸೇವೆಗಳು ದೊರೆಯುವುದು ದುರ್ಲಭ. ಆ ಸೇವೆಗಳನ್ನು ಪಡೆದುಕೊಳ್ಳುವ ಹಾದಿಗಳು ಮುಚ್ಚಿ ಹೋಗಿರುತ್ತವೆ; ಅವರಿಗೆ ಔಷಧಿಗಳು ದೊರೆಯುವುದಿಲ್ಲ; ಅವರ ಆರೈಕೆಗೆ ವೈದ್ಯಕೀಯ ಸೇವೆ ಲಭಿಸುವುದಿಲ್ಲ. ಗರ್ಭಿಣಿಯರು ಮತ್ತು ಕೂಸುಗಳಿಗೆ ನಿಯಮಿತವಾಗಿ ಆರೋಗ್ಯ ಸೇವಾ ಸೌಲಭ್ಯಗಳು ದೊರೆಯದಾಗುತ್ತವೆ.


ರಾಷ್ಟ್ರೀಯ ವಿಜ್ಞಾನ ದಿನ

ಪ್ರತಿಜ್ಞಾ ವಿಧಿ

ನಾನು ಭಾರತೀಯ ಸಂವಿಧಾನದ 51 A (h) ವಿಧಿಯ ಅನ್ವಯ ವೈಜ್ಞಾನಿಕ ಮನೋಭಾವನೆ ಮತ್ತು ವೈಚಾರಿಕತೆಯನ್ನು ಬೆಳೆಸಿಕೊಳ್ಳುತ್ತೇನೆ.

ನಾನು ಪ್ರಶ್ನೆ ಮಾಡದೇ ಯಾವುದೇ ತರ್ಕ ಒಪ್ಪುವುದಿಲ್ಲ ಹಾಗೂ ಸಂವಿಧಾನದ ಮೂಲಭೂತ ಕರ್ತವ್ಯದ ಆಶಯದಂತೆ ಮೌಢ್ಯತೆ ಮತ್ತು ಅಂಧಕಾರವನ್ನು ನಿರ್ಮೂಲನೆ ಮಾಡಿ ಜೀವ ಜಗತ್ತಿಗೆ ಪೂರಕವಾದ ಬದುಕನ್ನು ರೂಪಿಸಿಕೊಳ್ಳುತ್ತೇನೆಂದು ಈ ಮೂಲಕ "ರಾಷ್ಟ್ರೀಯ ವಿಜ್ಞಾನ ದಿನ"ದಂದು ಪ್ರತಿಜ್ಞೆ ಮಾಡುತ್ತೇನೆ.

ಜೈ ಭಾರತ, ಜೈ ಕರ್ನಾಟಕ,
ಜೈ ಸಂವಿಧಾನ, ಜೈ ವಿಜ್ಞಾನ

ಈ ಸನ್ನಿವೇಶ ಅವರನ್ನು ಜೀವಕ್ಕೆ ಮಾರಕವಾಗುವ ಸನ್ನಿವೇಶಕ್ಕೆ ಒಳಪಡಿಸುತ್ತದೆ.

ಇನ್ನು ಐದು ವರುಷಗಳಲ್ಲಿ ಗರ್ಭಿಣಿಯರು ಆರೋಗ್ಯದಿಂದ ಬದುಕುಳಿಯುವ ಜಾಗತಿಕ ಗುರಿಯನ್ನು ತಲುಪುವಲ್ಲಿ ಜಗತ್ತಿನ ಶೇ.80 ರಷ್ಟು ದೇಶಗಳು ವಿಫಲವಾಗುತ್ತವೆ. ಶೇಕಡ 66 ರಷ್ಟು ರಾಷ್ಟ್ರಗಳು ನವಜಾತ ಶಿಶುಗಳ ಮರಣವನ್ನು ತಪ್ಪಿಸುವಲ್ಲಿ ಸೋತು ಹೋಗುತ್ತವೆ. ಈ ಕಾರ್ಯಕ್ರಮಗಳಿಗೆ ಅಗತ್ಯವಾದ ನೆರವು ದೊರೆಯದೆ ಗರ್ಭಿಣಿಯರು, ಹಾಲೂಡಿಸುವ ತಾಯಂದಿರು ಮತ್ತು ಮಕ್ಕಳ ಆರೋಗ್ಯ ಸುಧಾರಣೆಯ ಕಾರ್ಯಕ್ರಮಗಳಿಗೆ ಅಗತ್ಯವಾದ ನೆರವು ದೊರೆಯುವುದು ದುರ್ಲಭವಾಗುವುದು ಮುಖ್ಯ ಕಾರಣಗಳಲ್ಲೊಂದು.

ಈ ವರುಷದ ಧ್ಯೇಯ ವಾಕ್ಯವನ್ನು ಸಾಕಾರಗೊಳಿಸುವ ದೃಷ್ಟಿಯಿಂದ ಇಡೀ ವರುಷದ ಕಾಲದಾದ್ಯಂತ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳಿಂದ ಸಹಕಾರವನ್ನು, ಧನಸಹಾಯವನ್ನು ಅಪೇಕ್ಷಿಸಲಾಗಿದೆ. ಈ ದಿಶೆಯಲ್ಲಿ ಹೊಸ ಶೋಧಗಳನ್ನು ಮಾಡುವ ಮತ್ತು ಅವರ ಆರೈಕೆಯಲ್ಲಿ ಹೆಚ್ಚಿನ ಅಭಿವೃದ್ಧಿ ಮಾಡುವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈ ದಿಶೆಯಲ್ಲಿ ಗರ್ಭಿಣಿಯರ ಆರೈಕೆಗೆ, ಆಗ ಉದ್ಭವಿಸಬಹುದಾದ ತೊಂದರೆಗಳು ಮತ್ತು ಅಡ್ಡ ತೊಡಕುಗಳ ನಿವಾರಣೆಗೆ, ಜೀವನ್ಮರಣ ಹೋರಾಟದಲ್ಲಿನ ಯಶಸ್ವಿಗೆ, ಹೆರಿಗೆಯಾದ ತಕ್ಷಣ ಉಂಟಾಗುವ ತಾಯಿ ಮತ್ತು ಮಗುವಿನ ಸಾವನ್ನು ತಪ್ಪಿಸಲು, ಕಾಲಕ್ಕೆ ಮೊದಲು ಪ್ರಸವ ಹೊಂದುವ ಕೂಸುಗಳ ವಿಶೇಷ ಆರೈಕೆಗೆ, ಆದ್ಯತೆ ನೀಡಿ ಅಮೂಲಾಗ್ರ ಸುಧಾರಣೆಗೆ ಗಮನ ಕೊಡುವುದಕ್ಕೆ ಮಹತ್ವ ನೀಡಬೇಕಾಗಿದೆ.

ಅಲ್ಲದೆ ತಾಯಿ ಮಕ್ಕಳ ಆರೋಗ್ಯದ ಮೇಲೆ ದುಷ್ಪ್ರಭಾವ ಬೀರುವ ಅನೇಕ ಆರೋಗ್ಯ ಸಂಬಂಧಿ ಸಮಸ್ಯೆಗಳತ್ತ ಗಮನ ನೀಡಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಕಾರ್ಯಕ್ರಮಕ್ಕೆ ಒತ್ತು ನೀಡಲಾಗಿದೆ. ಗರ್ಭಧಾರಣೆಯ ಕಾಲದಲ್ಲಿನ ತೊಂದರೆಗಳು, ಮಾನಸಿಕ ಸ್ಥಿತಿಗತಿಗಳು, ಅಪೌಷ್ಟಿಕತೆ, ನ್ಯೂನಪೋಷಣೆ ಮತ್ತು ಅಸಾಂಕ್ರಾಮಿಕ ರೋಗಗಳು (ಸಕ್ಕರೆ ಕಾಯಿಲೆ, ರಕ್ತಏರೊತ್ತಡ) ಈ ಸನ್ನಿವೇಶಗಳ ಕಡೆ ಆದ್ಯ ಗಮನ ನೀಡಬೇಕಾಗಿದೆ.

ಈ ಜಾಗತಿಕ ಕಾರ್ಯಕ್ರಮ, ಗರ್ಭಿಣಿ, ಬಾಣಂತಿ, ನವಜಾತ ಶಿಶುಗಳನ್ನು ಬದುಕುಳಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಅವರ ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ಸುಸ್ಥಿತಿಯಲ್ಲಿ ಕಾಯ್ದಿರಿಸುವ ವ್ಯಾಪಕ ಕಾರ್ಯಕ್ರಮವನ್ನು ಒಳಗೊಂಡಿದೆ.

ತಾಯಿ ಮತ್ತು ಮಕ್ಕಳ ಜೀವವನ್ನು ಉಳಿಸುವ

ಕಾರ್ಯಕ್ರಮಕ್ಕಷ್ಟೇ ಈ ಯೋಜನೆ ಸೀಮಿತವಾಗಿರದೆ ಅವರ ಆರೋಗ್ಯ, ಸ್ವಾಸ್ಥ್ಯ ಸುಧಾರಣೆಯ ದೂರಗಾಮೀ ಕಾರ್ಯಕ್ರಮಕ್ಕೆ ಒತ್ತುಕೊಡಲಾಗಿದೆ. ಅವರ ಆರೋಗ್ಯ ಅವರ ಹಕ್ಕಾಗಿದ್ದು, ಸುರಕ್ಷಿತ ತಾಯ್ತನಕ್ಕೆ ಬೇಕಾದ ಎಲ್ಲ ನೆರವು, ಪಗಾರಸಹಿತ ಹೆರಿಗೆ ರಜೆ ಮತ್ತು ಕುಟುಂಬ ಯೋಜನೆ ಕಾರ್ಯಕ್ರಮಗಳ ಸದುಪಯೋಗ, ಪೌಷ್ಟಿಕಾಹಾರ ಸೌಲಭ್ಯಗಳನ್ನೊಳಗೊಂಡಿದೆ. ಅವರ ಸುರಕ್ಷಿತ ಹೆರಿಗೆಗೆ ಮಾತ್ರ ಈ ಕಾರ್ಯಕ್ರಮ ಸೀಮಿತವಾಗಿರದೆ ಅವರು ಆರೋಗ್ಯದಿಂದ ಜೀವನದ ಸುಖ–ಸಂತೋಷವನ್ನು ಅನುಭವಿಸ ಬೇಕು. ಹೀಗಾಗಿ ಎಲ್ಲ ಬಾಲಕಿಯರು, ಯುವತಿಯರು ಮತ್ತು ವಯಸ್ಕ ಸ್ತ್ರೀಯರಿಗೆ ಆರೋಗ್ಯ ಸೇವಾ ಸೌಲಭ್ಯಗಳು ಸದಾ ಕಾಲ ದೊರೆಯಬೇಕು.

ಅದು ಅವರ ಅವಶ್ಯಕತೆಗಳನ್ನು ಪೂರೈಸಲು ಶಕ್ತವಾಗಿರ ಬೇಕು. ಈ ಸೇವಾಸೌಲಭ್ಯಗಳು ಅವರ ಫಲವಂತತೆಯನ್ನು ಕಾಯ್ದು, ಆರೋಗ್ಯವನ್ನು ಸುಧಾರಿಸಿ ರಕ್ಷಿಸಬೇಕು. ಹವಾಮಾನ ಬದಲಾವಣೆ, ಗರ್ಭಿಣಿಯರ ಮೇಲೆ ಮತ್ತು ನವಜಾತ ಶಿಶುಗಳ ಮೇಲೆ ಬೀರುವ ದುಷ್ಪ್ರಭಾವದಿಂದ ರಕ್ಷಣೆ ದೊರೆಯಬೇಕು. ಏರಿದ ಉಷ್ಣತೆ ಅಕಾಲ ಪ್ರಸವ, ನಿರ್ಜೀವ ಶಿಶು ಜನನ, ರಕ್ತಏರೊತ್ತಡ, ಗರ್ಭಾವಸ್ಥೆಯ ಸಕ್ಕರೆ ಕಾಯಿಲೆ, ತಾಯಿ ಮತ್ತು ಶಿಶು ಮರಣದ ಜೊತೆ ನಿಕಟ ಸಂಬಂಧ ಹೊಂದಿದ್ದು ಅವುಗಳಿಂದ ಅವರಿಗೆ ರಕ್ಷಣೆ ದೊರೆಯ ಬೇಕು.

ತಾಯಿ ಮತ್ತು ನವಜಾತ ಶಿಶುಗಳ ಆರೋಗ್ಯ ರಕ್ಷಣೆಯ ಮೇಲೆ ವಿನಿಯೋಗಿಸುವ ಹಣವನ್ನು ವೆಚ್ಚವೆಂದು ಪರಿಗಣಿಸದೆ, ಹೂಡಿಕೆಯೆಂದು ತಿಳಿಯಬೇಕು. ಅದು ಆರ್ಥಿಕವಾಗಿ ಸುಭದ್ರವಾದ, ಸಂತೋಷಕರ ಸ್ವಸ್ಥ ಸಮಾಜದ ಬೆಳವಣಿಗೆಡೆ ಮಾಡಿಕೊಡುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ 55 ರಾಷ್ಟ್ರಗಳಲ್ಲಿ ಪ್ರತಿಯೊಬ್ಬ ಮಹಿಳೆ, ಪ್ರತಿಯೊಂದು ನವಜಾತ ಶಿಶು ಎಂಬುದಷ್ಟಕ್ಕೆ ಸೀಮಿತವಾಗಿರದೆ, ಸ್ತ್ರೀ ಆರೋಗ್ಯ ಕಾಪಾಡಿ ಆಕೆಯ ಸ್ವಸ್ಥಜೀವನಕ್ಕೆ ಎಡೆ ಮಾಡಿಕೊಡುವ ಕಾರ್ಯಕ್ರಮಕ್ಕೆ ಜಾಗತಿಕ ಗಮನವನ್ನು ಸೆಳೆಯುವುದಕ್ಕೆ ಮಹತ್ವ ನೀಡಿದೆ.

ತಾಯಿ ಮಕ್ಕಳ ಆರೋಗ್ಯ ಸುಧಾರಣೆ, ಹೆರಿಗೆ ನಂತರದ ರಕ್ತಸ್ರಾವ ತಡೆ, ಗರ್ಭಧರಿಸಿದಾಗ ಬೆಳವಣಿಗೆ ಹೊಂದುವ ಅಸಾಂಕ್ರಾಮಿಕ ರೋಗಗಳು, ಸೋಂಕು ರೋಗಗಳಿಗೆ ಒಳಗಾಗದಿರು ವಂತಹ ಕಾರ್ಯಕ್ರಮಗಳಿಗೆ, ಲಸಿಕೆ, ಪೌಷ್ಟಿಕಾರದ ಕೊಡುಗೆ, ಪ್ರಸವ ಮುನ್ನಾ– ಮತ್ತು ನಂತರದ– ಆರೋಗ್ಯ ಸೇವೆಗೆ ಮಹತ್ವ ನೀಡಲಾಗಿದೆ.

ಆರೋಗ್ಯವಂತ ತಾಯಿ ಮತ್ತು ಮಕ್ಕಳು ಕುಟುಂಬದ ರೂಪುಗೊಳಿಕೆಗೆ ಅದು ಅವರ ಅವಶ್ಯಕತೆಗಳನ್ನು ಪೂರೈಸಲು ಶಕ್ತವಾಗಿರಬೇಕು. ಈ ಸೇವಾ ಸೌಲಭ್ಯಗಳು ಅವರ ಫಲವಂತತೆ ಯನ್ನು ಕಾಯ್ದು, ಆರೋಗ್ಯವನ್ನು ಸುಧಾರಿಸಿ ರಕ್ಷಿಸಬೇಕು. ಹವಾಮಾನ ಬದಲಾವಣೆ, ಗರ್ಭಿಣಿಯರ ಮೇಲೆ ಮತ್ತು ನವಜಾತ ಶಿಶುಗಳ ಮೇಲೆ ಬೀರುವ ದುಷ್ಪ್ರಭಾವದಿಂದ ರಕ್ಷಣೆ ದೊರೆಯಬೇಕು. ಏರಿದ ಉಷ್ಣತೆಯು ಅಕಾಲ ಪ್ರಸವ, ನಿರ್ಜೀವ ಶಿಶು ಜನನ, ರಕ್ತ ಏರೋತ್ತಡ, ಗರ್ಭಾವಸ್ಥೆಯ ಸಕ್ಕರೆ ಕಾಯಿಲೆ ತಾಯಿ ಶಿಶು ಮರಣದ ಜೊತೆ ನಿಕಟ ಸಂಬಂಧ ಹೊಂದಿದ್ದು ಅವುಗಳಿಂದ ಅವರಿಗೆ ರಕ್ಷಣೆ ದೊರೆಯಬೇಕು.

ಆರೋಗ್ಯವಂತ ತಾಯಿ ಮತ್ತು ಮಕ್ಕಳು ಕುಟುಂಬ ಮತ್ತು ಸಮುದಾಯದ ಅಡಿಪಾಯವಾಗಿದ್ದು ಅವರಿಗೆ ನಮ್ಮ ಸಹಾಯ ಹಸ್ತಚಾಚಿ ಭವಿಷ್ಯತ್ತಿನ ಸುಖಕ್ಕೆ ಎಡೆಮಾಡಿಕೊಟ್ಟು ಬಲಿಷ್ಠ ಸಮಾಜವನ್ನು ನಿರ್ಮಿಸಬೇಕು. ಅದು ಎಲ್ಲರ ಭವಿಷ್ಯವನ್ನು ಸುಖಕರವಾಗಿಸುತ್ತದೆ. ಅದರಿಂದಾಗಿ ಗುಣಮಟ್ಟದ ಸೇವೆ ಮಹತ್ವವನ್ನು ಪಡೆದಿದೆ.



## ಅಪ್ರತಿಮ ವಿಜ್ಞಾನಿ ಡಾ. ಕಸ್ತೂರಿರಂಗನ್ ವಿಧಿವಶ

**ತಮಿಳು ಮೂಲದ ಕೆ. (ಕೃಷ್ಣಸ್ವಾಮಿ) ಕಸ್ತೂರಿರಂಗನ್ ಅಕ್ಟೋಬರ್ 24, 1940 – ಏಪ್ರಿಲ್ 25, 2025) ಜನನ ಕೇರಳದ ಎರ್ನಾಕುಲಂನಲ್ಲಿ. ವಿಜ್ಞಾನದ ಅಧ್ಯಯನ ಮುಂಬಯಿಯಲ್ಲಿ; ಹೆಚ್ಚು ಸಾಮರ್ಥ್ಯದ ಖಗೋಳ ವಿಜ್ಞಾನ ವಿಷಯದಲ್ಲಿ ಡಾಕ್ಟರೇಟ್ ಪಡೆದದ್ದು ಅಹಮದಾಬಾದ್‌ನಲ್ಲಿ. ಉದ್ಯೋಗ ಬೆಂಗಳೂರಿನಲ್ಲಿ. ಅವರ ನಿಧನಕ್ಕೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಪಾರ ಖೇದವನ್ನು ವ್ಯಕ್ತಪಡಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.**

**ಡಾ. ಕಸ್ತೂರಿರಂಗನ್ ಅವರು ಇಸ್ರೋ ಅಧ್ಯಕ್ಷರಾಗಿ (1994–2003) ಕಾರ್ಯ ನಿರ್ವಹಿಸಿ ಇನ್ಸಾಟ್–2, ಪಿಎಸ್‌ಎಲ್‌ವಿ, ಜಿಎಸ್‌ಎಲ್9, ಸ್ಯಾಟಲೈಟ್‌ಗಳ ಉಡಾಯನ, ಚಂದ್ರಾಯಣ ಕಾರ್ಯಕ್ರಮಗಳನ್ನು ರೂಪಿಸಿದರು. ಇಸ್ರೋ ಬೆಳವಣಿಗೆಯಲ್ಲಿ ಅಪಾರಕೊಡುಗೆ ನೀಡಿದ ಹಿರಿಮೆ ಅವರದು. ವಿಜ್ಞಾನ, ಶಿಕ್ಷಣ, ಪರಿಸರದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ಅವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಬೆಂಗಳೂರು ನಿರ್ದೇಶಕರಾಗಿ (2004–2009) ಸೇವೆ ಸಲ್ಲಿಸಿದರು. ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ ಕುಲಪತಿಯಾಗಿದ್ದ ಅವರು ರಾಜ್ಯಸಭೆ, ಯೋಜನಾ ಆಯೋಗದ ಸದಸ್ಯರಾಗಿದ್ದರು. ಆರು ರಾಜ್ಯಗಳಲ್ಲಿ ವಿಸ್ತರಿಸಿದ ಪಶ್ಚಿಮ ಘಟ್ಟಗಳ ರಕ್ಷಣೆ, ಅಯೋಗ, ಕರ್ನಾಟಕ ಜ್ಞಾನ ಆಯೋಗ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸುವ ಸಮಿತಿ ಅಧ್ಯಕ್ಷರಾಗಿದ್ದರು. ದೇಶದ ಮೂರು ಪ್ರತಿಷ್ಠಿತ ವಿಜ್ಞಾನ ಅಕಾಡೆಮಿ ಫೆಲೋ ಆಗಿದ್ದ ಅವರು 27 ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಪಡೆದಿದ್ದರು. ಪದ್ಮವಿಭೂಷಣ, ಭಟ್ನಾಗರ್ ಪ್ರಶಸ್ತಿ, ಆರ್ಯಭಟ, ವಿಕ್ರಂ ಸಾರಾಭಾಯ್ ಪ್ರಶಸ್ತಿ ಪುರಸ್ಕೃತರಾದ ಡಾ.ಕಸ್ತೂರಿರಂಗನ್ ಅವರಿಗೆ ಇಬ್ಬರು ಮಕ್ಕಳು. ಪತ್ನಿ ಲಕ್ಷ್ಮಿ 1991 ರಲ್ಲಿ ನಿಧನರಾಗಿದ್ದರು. ಕರ್ನಾಟಕ ವಿಜ್ಞಾನ–ತಂತ್ರಜ್ಞಾನ ಅಕಾಡೆಮಿಯು ಡಾ. ಕಸ್ತೂರಿ ರಂಗನ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಮತ್ತು ಗೌರವ ಫೆಲೋಶಿಪ್ ಸನ್ಮಾನವನ್ನು ೨೦೨೧ರಲ್ಲಿ ನೀಡಿ ಗೌರವಿಸಿದ್ದಿತು.**

# ವಿಜ್ಞಾನ ಲೋಕ ಚಂದಾದಾರಿಕೆ ಅರ್ಜಿ

ಹೆಸರು: ______________________________

ವಿಳಾಸ: ______________________________

______________________________

______________________________

ಪಿನ್‌ಕೋಡ್ ______________________________

ಇ–ಮೇಲ್: ______________________________

ದೂರವಾಣಿ: ______________________________

ಉದ್ಯೋಗ: ______________________________

ಸಂಸ್ಥೆ: ______________________________

______________________________

ಚಂದಾದಾರಿಕೆ: ☐ ವೈಯಕ್ತಿಕ ☐ ವಾರ್ಷಿಕ

☐ ಸಾಂಸ್ಥಿಕ ☐ 3 ವರ್ಷಗಳು

| ಚಂದಾದಾರಿಕೆ | ವೈಯಕ್ತಿಕ | ಸಾಂಸ್ಥಿಕ |
|---|---|---|
| ಬಿಡಿ ಪ್ರತಿ | ರೂ. 50/– | – |
| ವಾರ್ಷಿಕ | ರೂ. 300/– | ರೂ. 500/– |
| 3 ವರ್ಷಗಳು | ರೂ. 875/– | ರೂ. 1,500/– |

ಚಂದಾ ಶುಲ್ಕ ಪಾವತಿಸಿದ ವಿವರ: ______________________________

______________________________

MERCHANT NAME: KARNATAKA SCIENCE AND TECHNOL
UPI ID: KSTABANGALORE@SBI

SCAN & PAY

**ಅಕಾಡೆಮಿಯ ಬ್ಯಾಂಕ್ ಖಾತೆ:**

Name: Karnataka Science and Technology Academy
Bank: State Bank of India
A/c No. 64001018807
IFSC: SBIN0009045
Branch: Vidyaranyapura
**UPI ID: KSTABANGALORE@SBI**

ಆಸಕ್ತರು ಭರ್ತಿ ಮಾಡಿದ ಚಂದಾದಾರಿಕೆ ಅರ್ಜಿಯನ್ನು ಪಾವತಿ ಮಾಡಿದ ಶುಲ್ಕದೊಂದಿಗೆ ಅಕಾಡೆಮಿಯ ಇಮೇಲ್: vijnanaloka@gmail.com ಗೆ ಕಳುಹಿಸಿ.